# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577002.
ದೂರವಾಣಿ ಸಂಖ್ಯೆ: 08192-208029


ದಾವಿವಿ/ಶೈಕ್ಷಣಿಕ/ಸ್ನಾತಕ/ಸಿಬಿಸಿಎಸ್/393 ದಿನಾಂಕ:27-02-2018

## :ಅಧಿಸೂಚನೆ:

ವಿಷಯ: ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ಕೋರ್ಸ್‌ಗಳಿಗೆ ಅನ್ವಯವಾಗುವ CBCS ವಿನಿಯಮಗಳಲ್ಲಿ ಅಳವಡಿಸಿರುವ ಪರೀಕ್ಷಾ ನಿಯಮಗಳ ತಿದ್ದುಪಡಿ ಬಗ್ಗೆ.

ಉಲ್ಲೇಖ:
1. NSUI ವಿದ್ಯಾರ್ಥಿ ಸಂಘಟನೆ ಮನವಿ ಪತ್ರ ದಿನಾಂಕ: 15-02-2018.
2. ಕುಲಸಚಿವರು (ಪ), ದಾವಿವಿ ಇವರ ಸುತ್ತೋಲೆ ಸಂಖ್ಯೆ: ದಾವಿ/ಪವಿ/2016-17/03, ದಿನಾಂಕ: 31-03-2017.
3. ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:25-09-2017ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯ ವಿಷಯ ಸಂಖ್ಯೆ:03/9-17.
4. ವಿಶ್ವವಿದ್ಯಾನಿಲಯದ ಅಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ:16-02-2018.
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:22-02-2018.
6. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಶೈಕ್ಷಣಿಕ/ಸ್ನಾತಕ/ಸಿಬಿಸಿಎಸ್/ 393/6358, ದಿನಾಂಕ: 23-02-2018.
7. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24-02-2018.

*********

ವಿಶ್ವವಿದ್ಯಾನಿಲಯದ ಉಲ್ಲೇಖಿತ (6)ರ ಅಧಿಸೂಚನೆಯಲ್ಲಿ ಸಿಬಿಸಿಎಸ್ ಸ್ಕೀಂನಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ "ಪರೀಕ್ಷೆಗಳ" ಹಾಜರಾತಿಗೆ ಸಂಬಂಧಿಸಿದಂತೆ ನಿಯಮಗಳನ್ನು ಅಧಿಸೂಚಿಸಲಾಗಿತ್ತು. ತದನಂತರ ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ಮಟ್ಟದಲ್ಲಿ ಸಿಬಿಸಿಎಸ್ ಪದ್ಧತಿ ಜಾರಿಗೊಳಿಸುವ ಪೂರ್ವದಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಾಲೇಜುಗಳಲ್ಲಿ ಅನುಸರಿಸಲಾಗುತ್ತಿದ್ದ "ಪರೀಕ್ಷಾ" ನಿಯಮಗಳನ್ನು ಮುಂದುವರೆಸುವ ಸಲುವಾಗಿ ಈ ಕೆಳಗಿನಂತೆ ಪುನಃ ಅಧಿಸೂಚಿಸಿದೆ.

ಈ ಹಿನ್ನೆಲೆಯಲ್ಲಿ "ಬೆಸ ಸೆಮಿಸ್ಟರುಗಳಿಗೆ (3ನೇ ಮತ್ತು 5ನೇ ಸೆಮಿಸ್ಟರುಗಳಿಗೆ) ಮುಂಬಡ್ತಿ ಪಡೆಯಲು ಹಿಂದಿನ ಎಲ್ಲಾ ಸೆಮಿಸ್ಟರುಗಳಲ್ಲಿ ಒಟ್ಟಾರೆ ವಿಷಯಗಳನ್ನು ಆಧರಿಸಿ ಶೇಕಡ 40ರಷ್ಟು ವಿಷಯಗಳಲ್ಲಿ ಪಾಸಾಗಿರತಕ್ಕದ್ದು ಎಂದು ಪರಿಗಣಿಸಲು ಆದೇಶಿಸಿದೆ. [**ಉದಾ:- 14 ವಿಷಯಗಳಿಗೆ ಶೇಕಡ 40ರಂತೆ ಲೆಕ್ಕ ಹಾಕಿದಾಗ 5.6ಎಂದು ಬರುತ್ತದೆ. ಇದರಲ್ಲಿ ಅಪೂರ್ಣ ಅಂಕ (fraction) 0.6 ಹೊರತುಪಡಿಸಿ, ಉಳಿದ ಉಪಲಬ್ಧಿಯ 5 ಅನ್ನು ಅರ್ಹತಾ ವಿಷಯಗಳಾಗಿ ಮಾತ್ರ ಪರಿಗಣಿಸುವುದು**].

ಇನ್ನುಳಿದಂತೆ ಉಲ್ಲೇಖ (6)ರ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಆದೇಶಾನುಸಾರ,

ಕುಲಸಚಿವರು,
ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ - 577002.

ಇವರಿಗೆ,

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:-

1. ಡೀನರು, ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ನಿಕಾಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಎಲ್ಲಾ ವಿಭಾಗಾಧ್ಯಕ್ಷರು/ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ವಿಭಾಗಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ವಿಶ್ವವಿದ್ಯಾನಿಲಯದ ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಮಾನ್ಯ ಕುಲಪತಿಗಳು/ಕುಲಸಚಿವರ ಆಪ್ತಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕಛೇರಿ ಪ್ರತಿ.